ಇ) ಹೌದು, ರಾಜ್ಯದಲ್ಲಿ ಆದ ಬೆಳೆ ನಾಶ ಪರಿಹಾರ ಕುರಿತು ದಿನಾಂಕ 25-3-98 ರಂದು ಕೃಷಿ ಇಲಾಖೆಯು ಮನವಿ ಸಲ್ಲಿಸಿದೆ.

ಈ) ಈ ಸಂಬಂಧ ಕೇಂದ್ರದಿಂದ ಈವರೆವಿಗೂ ಯಾವ ಹೆಚ್ಚಿನ ನೆರವು ಬಂದಿಲ್ಲ.

ವಿಜಾಪುರ ತಾಲ್ಲೂಕಿನಲ್ಲಿ ಸರಕಾರಿ ಜಮೀನನ್ನು ಖಾಸಗಿಯವರಿಗೆ ನೀಡಿರುವುದು

1932 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಜಾಪುರ ತಾಲ್ಲೂಕಿನಲ್ಲಿ ಸರಕಾರಿ ಜಮೀನಿನ ಒಟ್ಟು ವಿಸ್ತೀರ್ಣ ಎಷ್ಟು?*

ಆ) *ವಿಜಾಪುರ ನಗರದ ಸುತ್ತಮುತ್ತಲು ಎಷ್ಟು ಎಕರೆ ಜಮೀನು ಇರುವುದು?*

ಇ) *ಸರಕಾರಿ ಜಮೀನನ್ನು ಖಾಸಗಿಯವರಿಗೆ ನೀಡಲಾಗಿದೆಯೇ, ಹಾಗೆ ನೀಡಿದಲ್ಲಿ ಅವರ ಹೆಸರು ಸಹಿತವಾಗಿ ಯಾವ ಉದ್ದೇಶಗಳಿಗಾಗಿ ನೀಡಲಾಗಿದೆ? (ವಿವರ ನೀಡುವುದು)*

ಶ್ರೀ ಬಿ. ಸೋಮಶೇಖರ್ (ಕಂದಾಯ ಮಂತ್ರಿಗಳು) :

ಅ) 4348-06 ಎಕರೆಗಳು

ಆ) 957-31 ಎಕರೆಗಳು

ಇ) 0-20 ಗುಂಟೆ ಲೀಸ್ ಮೇಲೆ ಕಲ್ಲುಗಣಿ ಉದ್ದೇಶಕ್ಕಾಗಿ ನೀಡಲಾಗಿದೆ. ಶ್ರೀ ಬಸಪ್ಪ ಶಿದ ಪಡಗಾನೂರು ಸಾ: ವಿಜಾಪುರ ಇವರಿಗೆ ಲೀಸ್ ಮೇಲೆ ಮಂಜೂರು ಮಾಡಲಾಗಿದೆ.

ವಿಜಾಪುರ ನಗರದಲ್ಲಿ ಮನೆಗಳಿಗೆ ಕಂದಾಯ ನಿಗದಿ ಮಾಡುವ ಬಗ್ಗೆ

1933 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಪೌರಾಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ನಗರದಲ್ಲಿಯ ಮನೆಗಳ ಮೇಲಿನ ನಗರಸಭೆಯ ಕರಗಳ ನಿರ್ಧರಣಾ ಕಾರ್ಯ ಪ್ರಾರಂಭವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಮನೆ ಕಂದಾಯವನ್ನು ನಿರ್ಧರಿಸುವ ಅಳತೆಗೋಲುಗಳಾವುವು?*

ಇ) *ಹಾಲಿ ಇರುವ ಕರದ ಮೇಲೆ ಶೇಕಡವಾರು ಹೆಚ್ಚಿಸುವುದರ ಮುಖಾಂತರ ಸರಳ ರೀತಿಯಲ್ಲಿ ಕ್ರಮಕೈಗೊಳ್ಳುವುದೇ?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಮಂತ್ರಿಗಳು) :

ಅ) ಬಂದಿದೆ.

ಅ) ಮಾಸಿಕ ಬಾಡಿಗೆ ಮೌಲ್ಯದ ಆಧಾರದ ಮೇಲೆ ಕರ್ನಾಟಕ ಮುನ್ಸಿಪಾಲ್ಟಿ ಕಾಯ್ದೆ 1964ರ ಕಲಂ 106 ಮತ್ತು 107ರ ಪ್ರಕಾರ ಕರಾಕರಣೆ ಮಾಡಲಾಗುತ್ತದೆ.

ಇ) ನಗರಸಭೆಯ ನಿಯಮಾವಳಿಗಳಲ್ಲಿ ಈ ರೀತಿಯ ಕರ ಪರಿಷ್ಕರಣೆಗೆ ಅವಕಾಶವಿರುವುದಿಲ್ಲ.

ವಿಜಾಪುರ ನಗರಸಭೆಯಲ್ಲಿ ಶೇ. 18ರ ಅಭಿವೃದ್ಧಿ ಕಾರ್ಯಕ್ರಮಗಳು

1934 - ಶ್ರೀ ಬಸವನಗೌಡ ರಾ. ಪಾಟೀಲ್ (ಬಿಜಾಪುರ) : ಮಾನ್ಯ ಪೌರಾಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95, 1995-96, 1996-97ರ ಅವಧಿಯಲ್ಲಿ ವಿಜಾಪುರ ನಗರಸಭೆಯು ಪರಿಶಿಷ್ಟ ಜಾತಿ: ಹಾಗೂ ಪರಿಶಿಷ್ಟ ಜನಾಂಗದ ಅಭಿವೃದ್ಧಿಗಾಗಿ ಮಾಡಿರುವ ಕಾರ್ಯಕ್ರಮಗಳು ಯಾವುವು? (ವಿವರ ನೀಡುವುದು)

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ವಿಜಾಪುರ ನಗರಸಭೆಯ ಶೇ.18ರ ಕಾಯ್ದಿರಿಸಿದ ಹಣದಲ್ಲಿ ವರ್ಷವಾರು ಈ ಕೆಳಕಾಣಿಸಿದಂತೆ ಕಾರ್ಯಕ್ರಮ ರೂಪಿಸಿ, ಅವುಗಳನ್ವಯ ಹಣ ಖರ್ಚು ಮಾಡಿದೆ.

ವರ್ಷ	ಯೋಜನೆಗಳ ಹೆಸರು	ಖರ್ಚು ಮಾಡಿದ ಹಣ
1	2	3
1994-95	1. ಬಾಲವಾಡಿಗಳ ನಿರ್ವಹಣೆ	1,89,590
	2. ಪರಿಶಿಷ್ಟ ಜಾತಿ:ಪಂಗಡ ಜನರ ಸ್ಮಶಾನ ನಿರ್ಮಾಣ	25,000
	3. ಪರಿಶಿಷ್ಟ ಜಾತಿ:ಪಂಗಡಗಳ ಬಡಾವಣೆಯಲ್ಲಿ ವಿದ್ಯುತ್ ಕಂಬ ಹಾಕುವುದು	1,52,765
	4. ಪರಿಶಿಷ್ಟ ಜಾತಿ: ಪಂಗಡಳ ಬಡಾವಣೆಗಳಲ್ಲಿ ಸಮಾಜಮಂದಿರ ನಿರ್ಮಾಣ	1,27,690
	5. ಪರಿಶಿಷ್ಟ ಜಾತಿ: ಪಂಗಡಗಳ ಬಡಾವಣೆಗಳಲ್ಲಿಯ ರಸ್ತೆ ಡಾಂಬರೀಕರಣ	1,12,920
	6. ವಾರ್ಡ್ ನಂ. 1ರಿಂದ 10ರವರೆಗೆ ಇರುವ ಪರಿಶಿಷ್ಟಜಾತಿ: ಪಂಗಡಗಳ ಜನರ ಬಡಾವಣೆಗಳಲ್ಲಿ ಖಡಿ ರಸ್ತೆ	2,18,973
	7. ಕಾಕಾ ಕಾರ್ಖಾನೀನ ಕಲ್ಯಾಣ ಮಂಟಪಕ್ಕೆ ಕಾಂಪೌಂಡ್ ಗೋಡೆ ಹಾಗೂ ಸೀಲಿಂಗ್ ಕೆಲಸ	1,86,906